# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ: 08221-224311
08221-225551
E- mail: aeengd1@cescmysore.org

ರವರ ಕಛೇರಿ,
ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ)
ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ,
ಆರ್.ಪಿ.ರಸ್ತೆ, ನಂಜನಗೂಡು-571301.

ಸಂಖ್ಯೆ: ಸಕಾನಿಇಂ (ವಿ)/ಸಇಂ (ತಾ)/2017-18/ 1725-28

ದಿನಾಂಕ: 25/11/2017

## ಜನ ಸಂಪರ್ಕ ಸಭಾ ನಡಾವಳಿ

ದಿನಾಂಕ:03.11.2017 ರಂದು ನಂಜನಗೂಡು ಉಪವಿಭಾಗದ ಕಛೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್ (ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯ ಸಭಾ ನಡಾವಳಿ

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ ಎನ್.ನರಸಿಂಹೇಗೌಡ — ಅಧೀಕ್ಷಕ ಇಂಜಿನಿಯರ್(ವಿ)
2. ಶ್ರೀ ಎ.ಎ ಸುನೀಲ್ ಕುಮಾರ್ — ಕಾರ್ಯನಿರ್ವಾಹಕ ಇಂಜಿನಿಯರ್(ವಿ)
3. ಶ್ರೀ ಆನಂದ್.ಸಿ.ಎಸ್ — ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
4. ಶ್ರೀಮತಿ ಹೇಮ.ಬಿ — ಸಹಾಯಕ ಇಂಜಿನಿಯರ್(ತಾಂತ್ರಿಕ)
5. ಶ್ರೀ ಕುಮಾರ್‌ಸ್ವಾಮಿ — ಮೇಲ್ವಿಚಾರಕರು ಪಟ್ಟಣ ಶಾಖೆ
6. ಶ್ರೀ ಬೋರಾಜು — ಮೇಲ್ವಿಚಾರಕರು ತಾಂಡವಪುರ ಶಾಖೆ
7. ಶ್ರೀ ಶಶಿಕಿರಣ್ — ಸಹಾಯಕ ಇಂಜಿನಿಯರ್ ಸಿಂದುವಳ್ಳಿಪುರ ಶಾಖೆ
8. ಶ್ರೀ ರಂಗಸ್ವಾಮಿ — ಕಿರಿಯ ಇಂಜಿನಿಯರ್ ಸುತ್ತೂರು ಶಾಖೆ
9. ಶ್ರೀಮತಿ ಲಕ್ಷ್ಮಿ — ಪ್ರಭಾರ ಸಹಾಯಕ ಲೆಕ್ಕಾಧಿಕಾರಿ

ಮೊದಲಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಗ್ರಾಹಕರು, ರೈತ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಇತರೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಪತ್ರಿಕಾ ಪ್ರತಿನಿಧಿಗಳನ್ನು ಸ್ವಾಗತಿಸಿದರು. ನಂತರ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಾದ ಶ್ರೀ ಸುನೀಲ್ ಕುಮಾರ್ ರವರು ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕೈಗೊಂಡ ಕ್ರಮಗಳ ಕುರಿತು ಅನುಪಾಲನ ವರದಿಯನ್ನು ಓದಿ ಹಾಗೂ ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕ್ರಮ ಕೈಗೊಂಡಿರುವ ಕುರಿತು ಶಾಖಾಧಿಕಾರಿಗಳು ಮತ್ತು ಗ್ರಾಹಕರೊಂದಿಗೆ ಚರ್ಚಿಸಲಾಯಿತು. ತದನಂತರ ಗ್ರಾಹಕರು ಹೊಸದಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು.

1. ಶ್ರೀ ಸುರೇಶ್, ದಲಿತ ಸಂಘರ್ಷ ಸಮಿತಿ ಮುಖಂಡರು ನಂಜನಗೂಡು ರವರು
   - ಶಂಕರಪುರ ಹೊಸಬಡಾವಣೆಗೆ ಹೋಗುವ ದಾರಿಯಲ್ಲಿ ಬೀದಿ ದೀಪದ ವ್ಯವಸ್ಥೆ ಮಾಡಬೇಕು ಎಂದು ಕೋರಿದರು,

- ಶಂಕರಪುರ ಬಡಾವಣೆಯಲ್ಲಿ ಪರಿವರ್ತಕ ದುರಸ್ತಿ ಗೊಳಿಸಿರುವುದು ಸರಿಯಷ್ಟೆ ಆದರೆ ಕೊಳಗೇರಿ ನಿರ್ಮೂಲನ ಮಂಡಳಿಯವರು ಸಮರ್ಪಕ ಕೆಲಸ ನಿರ್ವಹಿಸಿಲ್ಲ ಅದನ್ನು ಸರಿಪಡಿಸಬೇಕು ಎಂದು ಕೋರಿದರು.

2. ಶ್ರೀ ವಿದ್ಯಾಸಾಗರ್, ರೈತ ಸಂಘದ ಅಧ್ಯಕ್ಷರು ಚಿಕ್ಕಯ್ಯನ ಛತ್ರ ಹೋಬಳಿ, ಶ್ರೀ ಸುರೇಶ್ ದಲಿತ ಸಂಘರ್ಷ ಸಮಿತಿ ಮುಖಂಡರು, ಶ್ರೀ ವಿಜಯ ಕುಮಾರ್ ಜನಸಂಗ್ರಾಮ ಪರಿಷತ್ ಹೋರಾಟಗಾರರು ನಗರ್ಲೆ ರವರು

- ನಂಜನಗೂಡು ವಿಭಾಗದಲ್ಲಿ ವಿದ್ಯುತ್ ಕಂಬಕ್ಕೆ ಅಳವಡಿಸಿರುವ ದೂರವಾಣಿ ಮತ್ತು ಕೇಬಲ್ ನೆಟ್‌ವರ್ಕ್ ಸಂಸ್ಥೆಗಳ ವಿವರ ಮತ್ತು ಸದರಿ ಸಂಸ್ಥೆಗಳು ಪಾವತಿಸಿರುವ ಬಿಲ್‌ನ ಮೊತ್ತದ ವಿವರ ಕೋರಿದರು.

3. ಶ್ರೀ ಕೆಂಪರಾಜು ಗೀಕಳ್ಳಿಹುಂಡಿ ರವರು ವಿದ್ಯುತ್ ತಂತಿ ಬಾಗಿದೆ ಎಂದು ತಿಳಿಸಿ ಸರಿಪಡಿಸಿ ಕೂಡಲು ಕೋರಿದರು.

4. ಶ್ರೀ ಸುಂದರ್‌ರಾಜ್ ಗ್ರಾಹಕ ಸಲಹಾ ಸಮಿತಿಯ ಸದಸ್ಯರು ನಂಜನಗೂಡು LED Tube Light ಮತ್ತು LED Fan ವಿತರಿಸಲು ಕೋರಿದರು.

5. ಶ್ರೀ ಹರೀಶ್ S/O ಎಸ್.ಪಿ ನಾಗರಾಜು ಗೌರಿಘಟ್ಟ ಬೀದಿ ನಂಜನಗೂಡು ರವರು ತಮ್ಮ ತೋಟದಲ್ಲಿರುವ ಹೊಸ ಪಂಪ್‌ಸೆಟ್ಟ್ ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು.

6. ಶ್ರೀ ಎಂ ಸ್ವಾಮಿ ಮುಳ್ಳೂರು ರವರು 1 ಕಬ್ಬಿಣದ ಕಂಬವಿದ್ದು ಅದನ್ನು ಬದಲಾಯಿಸಲು ಕೋರಿದರು.

7. ಶ್ರೀ ಸತೀಶ್‌ರಾವ್. ಸಿಂಧುವಳ್ಳಿ ರವರು

- ಸಿಂಧುವಳ್ಳಿ ಗ್ರಾಮದಲ್ಲಿ 1 ಕಂಬ ಬದಲಾಯಿಸಲು ಕೋರಿದರು,
- ಶಂಕರಪುರ ಬಡಾವಣೆ ಜನತೆಗೆ ವಿದ್ಯುತ್ ಬಿಲ್‌ನ ಬಾಕಿ ಕಟ್ಟಲು ಕಾಲಾವಕಾಶ ಕೊಡಬೇಕು ಮತ್ತು ಸರ್ವೆ ನಂ:231 ರಲ್ಲಿ 4 ವಿದ್ಯುತ್ ಕಂಬಗಳು ಬಾಗಿವೆ ಮರುಜೋಡಣೆ ಮಾಡಿಕೂಡಬೇಕು ಮತ್ತು ಚಿಕ್ಕೀರೆಗೌಡ ಪರಿವರ್ತಕದಲ್ಲಿ ಸಮಸ್ಯೆಯಿದ್ದು ಸರಿಪಡಿಸಿಕೂಡಬೇಕು ಎಂದು ಕೋರಿದರು.

8. ಶ್ರೀ ವಿಜಯಕುಮಾರ್ ಜನಸಂಗ್ರಾಮ ಪರಿಷತ್ ಹೋರಾಟಗಾರ ನರ್ಗಲೆ ರವರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬೀದಿ ದೀಪ ಉರಿಯುತ್ತಿಲ್ಲ ಸರಿಪಡಿಸಬೇಕು ಎಂದು ಕೋರಿದರು.

9. ಶ್ರೀ ರವಿ ನಾಗಭೂಷಣ ರವರು ಚಾವಿಸನಿನಿ ನಂಜನಗೂಡು ವಿಭಾಗದಲ್ಲಿ ಅಧಿಕ ವರ್ಷಗಳಿಂದ ಒಂದೇಕಡೆ ಸೇವೆಸಲ್ಲಿಸಿತ್ತಿರುವ ಸಿಬ್ಬಂದಿಯನ್ನು ವರ್ಗಾಯಿಸಲು ಕೋರಿದರು.

10. ಶ್ರೀ ಎಂ ಚಿಕ್ಕಸ್ವಾಮಿ ಮುದ್ದಹಳ್ಳಿ ರವರ ಸ್ಥಾವರ ಸಂಖ್ಯೆ NP136 ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಮಾರ್ಗದಲ್ಲಿ 3 ಕಬ್ಬಿಣ ಕಂಬಗಳಿದ್ದು ಅವುಗಳನ್ನು ಬದಲಾಯಿಸಿಕೊಡುವಂತೆ ಕೋರಿದರು.

11. ಶ್ರೀಮತಿ ಮಾದಮ್ಮ ಕೋಂ ಚಿನ್ನನಾಯಕ, ಆರ್.ಆರ್ ನಂ. GPLBJ147 ರ ಅಸಾಮಾನ್ಯ ಬೇಡಿಕೆಯಾಗಿದ್ದು ವಿದ್ಯುತ್ ಬಿಲ್ ಬಾಕಿಯಲ್ಲಿ 26509 ಎಂದಿದೆ ಇದನ್ನು ಪರಿಶೀಲಿಸಿ ಸರಿಪಡಿಸಿಕೊಡಬೇಕು ಎಂದು ಕೋರಿದರು.

12. ಶ್ರೀ ಸಣ್ಣಶೆಟ್ಟಿ ಇಮ್ಮಾವುಹುಂಡಿ ರವರು ವಿದ್ಯುತ್ ತಂತಿಗಳನ್ನು ಎಳೆದುಕಟ್ಟಬೇಕು ಎಂದು ಕೋರಿದರು.

13. ಶ್ರೀ ಮಹದೇವಸ್ವಾಮಿ ದಲಿತ ಸಂಘರ್ಷ ಸಮಿತಿಯ ಸಂಚಾಲಕರು ನಂಜನಗೂಡು ರವರು

- ಸಿಟಿಜನ್ ಶಾಲೆಯ ಹತ್ತಿರದಲ್ಲಿ ಹೆಚ್.ಟಿ ಮಾರ್ಗ ಬದಲಾಯಿಸುವುದನ್ನು ತಡೆಗಟ್ಟಬೇಕು ಎಂದು ಕೋರಿದರು
- ಬೊಕ್ಕಳ್ಳಿಗ್ರಾದಲ್ಲಿ ಹಾನಿಗೊಳಗಾದ 2 ಕಂಬಗಳನ್ನು ಬದಲಾಯಿಸಿ ಕೊಡುವಂತೆ ಕೋರಿದರು.

14. ಶ್ರೀ ಮಹದೇವನಾಯಕ S/O ಚೌಡನಾಯಕ ಗೊದ್ದನಪುರ ರವರು ಗಂಗಾ ಕಲ್ಯಾಣ ಯೋಜನೆಯಡಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು.

15. ಶ್ರೀ ನಾರಾಯಣ ಮಲ್ಲಣ DSS ಸಹ ಸಂಚಾಲಕರು ರವರು ನಂಜನಗೂಡು ಪಟ್ಟಣದಲ್ಲಿರುವ ಬಿ ಆರ್ ಅಂಬೇಡ್ಕರ್ ವೃತ್ತದಲ್ಲಿ ನ ಬೀದಿದೀಪ ವಿದ್ಯುತ್ ಸಂಪರ್ಕ ಕಡಿತಗೊಂಡಿರುವುದನ್ನು ಸರಿಪಡಿಸಿಕೊಡಲು ಕೋರಿದರು.

16. ಶ್ರೀ ಜಿ.ಪ್ರಸಾದ್ ರವರು 11 ಕೆವಿ ನಂಜನಗೂಡು ಫೀಡರ್‌ನಿಂದ ಬನ್ನಾರಿಅಮ್ಮನ್ ಫ್ಯಾಕ್ಟರಿ ವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಇದರ ಮಾಹಿತಿ ಕೊಡಿ ಎಂದು ಕೋರಿದರು.

17. ಶ್ರೀ ಮಾದಪ್ಪ APMC ಅಧ್ಯಕ್ಷರು ನಂಜನಗೂಡು ರವರು

- ನಂಜನಗೂಡಿನಿಂದ ಹುಲ್ಲಹಳ್ಳಿ ವರೆಗೆ ಇರುವ ವಿದ್ಯುತ್ ಸಂಪರ್ಕವಿಲ್ಲದ ಖಾಲಿ ಕಂಬಗಳನ್ನು ತೆರವುಗೊಳಿಸಲು ಕೋರಿದರು.
- ಊರಿಂದ ಹೊರಗಡೆ ಇರುವ ತೋಟದ ಮನೆಗಳಿಗೆ NJY ವಿದ್ಯುತ್ ಸಂಪರ್ಕ ನೀಡಲು ಕೋರಿದರು.

18. ಶ್ರೀ ಸೇತು ಸರಸ್ವತಿ ಕಾಲೋನಿ ರವರು ಸುಣ್ಣದಗೂಡು ಪಕ್ಕದಲ್ಲಿ 2 ಕಬ್ಬಿಣದ ಕಂಬಗಳಿದ್ದು ಅವುಗಳನ್ನು ತೆರವುಗೊಳಿಸಲು ಕೋರಿದರು.

19.ಶ್ರೀ ಎಮ್.ಬಿ ಮನುದೇವಮೂರ್ತಿ ನಿವೃತ್ತ ಶಿಕ್ಷಕರು ನಂಜನಗೂಡು ರವರು ಉದ್ದನೆಯ ವಿದ್ಯುತ್ ತಂತಿಯಿದ್ದು ಮಧ್ಯಂತರ ವಿದ್ಯುತ್ ಕಂಬ ಅಳವಡಿಸಲು ಮತ್ತು ಪರಿವರ್ತಕ ಸ್ಥಳಾಂತರಿಸಲು ಕೋರಿದರು.

20. ಶ್ರೀ ಸ್ವಾಮಿ ಸೋನಹಳ್ಳಿ ರವರು ಕಂಬ ಬಾಗಿದೆ ಮರುಜೊಡಣೆ ಮಾಡಿಸಿಕೊಡಬೇಕೆಂದು ಕೋರಿದರು.

21. ಶ್ರೀ ಗುರುಲಿಂಗೇಗೌಡ ಬಿಳಿಗೆರೆ ಗ್ರಾಮ ರವರು ವಿದ್ಯುತ್ ಕಂಬ ಬಾಗಿವೆ ಮರುಜೊಡಣೆ ಮಡಿಕೊಡಬೇಕು ಮತ್ತು ಪರಿವರ್ತಕವನ್ನು ರಸ್ತೆ ಬದಿಗೆ ಸ್ಥಳಾಂತರಿಸಬೇಕು ಎಂದು ಕೋರಿದರು.

ಅಧಿಕ್ಷಕ ಇಂಜಿನಿಯರ್, ಕಾರ್ಯ ಮತ್ತು ಪಾಲನಾ ವೃತ, ಮೈಸೂರು ರವರು ಗ್ರಾಹಕರನ್ನು ಉದ್ದೇಶಿಸಿ ಮಾತನಾಡಿ ಸಭೆಯಲ್ಲಿ ಗ್ರಾಹಕರು ಮಂಡಿಸಿರುವ ದೂರುಗಳನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ತುರ್ತಾಗಿ ಅಗತ್ಯ ಕ್ರಮ ಕೈಗೊಳುವುದಾಗಿ ತಿಳಿಸಿದರು ಹಾಗೂ ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಶಾಖಾಧಿಕಾರಿಗಳಿಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.ಸಹಾಯಕ ಕಾರ್ಯನಿರ್ವಹಕ ಇಂಜಿನಿಯರ್‌ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

For Hemy B

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ-1
ಚಾ.ವಿ.ಸ.ನಿ.ನಿ, ನಂಜನಗೂಡು.

ಪ್ರತಿಯನ್ನು:
1) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನ ವೃತ್ತ, ಕುವೆಂಪುನಗರ ಮೈಸೂರು ರವರ ಅವಗಾಹನೆಗಾಗಿ
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ನಂಜನಗೂಡು ರವರ ಅವಗಾಹನೆಗಾಗಿ
3) ಸಂಬಂದ ಪಟ್ಟ ಶಾಖಾಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4) ಮು.ಕಡತ